ಆ) ಇಲ್ಲ. ನಿಗಧಿತ ಫೀ ಸ್ಟ್ರಕ್ಚರ್ ಅನುಸಾರ ಶುಲ್ಕ ಭರಿಸಿಕೊಳ್ಳಲಾಗುತ್ತಿದೆ.

ಇ) ಉದ್ಭವಿಸುವುದಿಲ್ಲ.

ಈ) ಹೌದು. ನಿಗಧಿತ ಫೀ ಸ್ಟ್ರಕ್ಚರ್ ಪ್ರಕಾರ ತುಂಬಿದ ಹಣ ವ್ಯತ್ಯಾಸವಾದಲ್ಲಿ ಅಂತಹ ವಿದ್ಯಾರ್ಥಿಗಳಿಂದ ತುಂಬಿಸಿಕೊಳ್ಳಲಾಗುವುದು/ ಮರಳಿಸಲಾಗುವುದು.

ಉ) ಉದ್ಭವಿಸುವುದಿಲ್ಲ.

ರಾಜ್ಯದ ಜಿಲ್ಲಾ ಹಾಗೂ ತಾಲ್ಲೂಕು ಪಂಚಾಯ್ತಿಗಳಿಗೆ ಅನುದಾನ

4540 (4831) : ಶ್ರೀ ಲಕ್ಷ್ಮೀನಾರಾಯಣ ಎಂ.ಡಿ. (ಅಣ್ಣಯ್ಯ) (ತುರುವೇಕೆರೆ) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದ ಜಿಲ್ಲಾ ಪಂಚಾಯ್ತಿಗಳಿಗೆ ಹಾಗೂ ತಾಲ್ಲೂಕು ಪಂಚಾಯಿತಿಗಳಿಗೆ ಯೋಜನೆ ಮತ್ತು ಯೋಜನೇತರ ಶೀರ್ಷಿಕೆಗಳಲ್ಲಿ ಬಿಡುಗಡೆ ಮಾಡಿದ ಹಣ ಎಷ್ಟು; ಕಳೆದ 3 ವರ್ಷದ ವಿವರಗಳನ್ನು ತಾಲ್ಲೂಕುವಾರು ನೀಡುವುದು;

ಆ) ಬಿಡುಗಡೆ ಮಾಡಿದ ಹಣ ಪೂರ್ಣವಾಗಿ ಖರ್ಚು ಮಾಡಲಾಗಿದೆಯೇ;

ಇ) ಉಳಿದ ಹಣ ವಾಪಾಸು ಮಾಡಿರುವ ಜಿಲ್ಲಾ ಹಾಗೂ ತಾಲ್ಲೂಕು ಪಂಚಾಯ್ತಿಗಳು ಯಾವುವು; ಹಣ ಉಳಿಯಲು ಕಾರಣವೇನು?

ಶ್ರೀ ಎಂ.ವೈ. ಘೊರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಸಚಿವರು)

ಅ) ಕಳೆದ 3 ವರ್ಷಗಳಲ್ಲಿ ರಾಜ್ಯದ ಜಿಲ್ಲಾ ಪಂಚಾಯ್ತಿಗಳಿಗೆ ಹಾಗೂ ತಾಲ್ಲೂಕು ಪಂಚಾಯಿತಿಗಳಿಗೆ (ಗ್ರಾಮ ಪಂಚಾಯತಿಗಳ ಪಾಲು ಸೇರಿ) ಯೋಜನೆ ಮತ್ತು ಯೋಜನೇತರ ಶೀರ್ಷಿಕೆಗಳಲ್ಲಿ ಬಿಡುಗಡೆ ಮಾಡಿದ ಹಣದ ವಿವರಗಳು ಈ ಕೆಳಕಂಡಂತಿವೆ.

(ರೂ. ಕೋಟಿಗಳಲ್ಲಿ)

ವರ್ಷಗಳು	ಯೋಜನೆ	ಯೋಜನೇತರ	ಒಟ್ಟು
2000–01	1454.91	2840.33	4295.24
2001–02	1223.94	2823.30	4047.24
2002–03	1112.52	3133.79	4246.31

ಸರ್ಕಾರದಿಂದ ಜಿಲ್ಲಾ ಪಂಚಾಯತ್‌ಗಳಿಗೆ ಹಣ ಬಿಡುಗಡೆ ಮಾಡಿರುವುದರಿಂದ ಜಿಲ್ಲಾ ಪಂಚಾಯತ್‌ವಾರು ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಆ) ಇಲ್ಲ.

ಇ) ಸರ್ಕಾರದಿಂದ ಬಿಡುಗಡೆಯಾದ ಹಣದಲ್ಲಿ ಜಿಲ್ಲಾ ಹಾಗೂ ತಾಲ್ಲೂಕು ಪಂಚಾಯತಿಗಳು ಖರ್ಚು ಮಾಡದೇ ಉಳಿದ ಹಣವು ಜಿಲ್ಲಾ ಹಾಗೂ ತಾಲ್ಲೂಕು ಪಂಚಾಯತಿಗಳ ನಿಧಿಯಲ್ಲಿಯೇ ಮುಂದುವರೆಯುತ್ತದೆ.

ಕೆಲವೊಂದು ಯೋಜನೆಗಳಿಗೆ ಉದಾಹರಣೆಗೆ ಗ್ರಾಮೀಣ ನೀರು ಸರಬರಾಜು, ಆರೋಗ್ಯ ಮತ್ತು ಪಶು ಸಂಗೋಪನಾ ಇಲಾಖೆಗಳಿಗೆ ಔಷಧಿ ಮತ್ತು ಸಾಧನ ಸಲಕರಣೆ ಖರೀದಿ, ಸಣ್ಣ ನೀರಾವರಿ ಕಾಮಗಾರಿಗಳು ಮತ್ತು ಶಿಕ್ಷಣ ಇಲಾಖೆಯ ಕಟ್ಟಡಗಳ ಕಾಮಗಾರಿ ಇತ್ಯಾದಿಗಳಿಗೆ ಆಯಾ ಹಣಕಾಸು ವರ್ಷದ ಅಂತ್ಯದಲ್ಲಿ ಹಣ ಬಿಡುಗಡೆಯಾಗುತ್ತದೆ. ಅಲ್ಲದೆ ಕೆಲವೊಂದು ಕಾಮಗಾರಿಗಳನ್ನು ಟೆಂಡರ್ ಮೂಲಕ ಅನುಷ್ಠಾನಗೊಳಿಸಬೇಕಾಗಿದ್ದು, ಕಾಲಾವಕಾಶ ಕಡಿಮೆ ಇರುವುದರಿಂದ ಬಿಡುಗಡೆ ಮಾಡಿದ ಅನುದಾನವನ್ನು ಆಯಾ ವರ್ಷಗಳಲ್ಲಿ ಉಪಯೋಗಿಸುವುದು ಕಷ್ಟ ಸಾಧ್ಯವಾಗುತ್ತದೆ. ಆದುದರಿಂದ, ಜಿಲ್ಲಾ ಮತ್ತು ತಾಲ್ಲೂಕು ಪಂಚಾಯಿತಿಗಳಲ್ಲಿ ಹಣ ಉಳಿಯುತ್ತದೆ.

ಅನುಬಂಧ

ರಾಜ್ಯದ ಜಿಲ್ಲಾ ಪಂಚಾಯ್ತಿಗಳಿಗೆ ಹಾಗೂ ತಾಲ್ಲೂಕು ಪಂಚಾಯಿತಿಗಳಿಗೆ (ಗ್ರಾಮ ಪಂಚಾಯತ್‌ಗಳ ಪಾಲು ಸೇರಿ) ಯೋಜನೆ ಮತ್ತು ಯೋಜನೇತರ ಶೀರ್ಷಿಕೆಗಳಲ್ಲಿ ಬಿಡುಗಡೆ ಮಾಡಿದ ಹಣದ ವಿವರಗಳು

(ರೂ. ಲಕ್ಷಗಳಲ್ಲಿ)

ಕ್ರಮ ಸಂಖ್ಯೆ	ಜಿಲ್ಲಾ ಪಂಚಾಯ್ತಿಗಳು	2000–01			2001–02			2002–03		
		ಯೋಜನೆ	ಯೋಜನೇತರ	ಒಟ್ಟು	ಯೋಜನೆ	ಯೋಜನೇತರ	ಒಟ್ಟು	ಯೋಜನೆ	ಯೋಜನೇತರ	ಒಟ್ಟು
1.	ಬೆಂಗಳೂರು (ನಗರ)	3994.89	18190.01	22184.90	3858.53	18040.71	21899.24	3227.00	18957.70	22184.70
2.	ಬೆಂಗಳೂರು (ಗ್ರಾಮಾಂತರ)	6501.97	10896.38	17398.35	6050.40	10559.07	16609.47	4314.11	12727.66	17041.77
3.	ಚಿತ್ರದುರ್ಗ	5296.18	10334.77	15630.95	4436.50	10315.93	14752.43	4244.56	10964.52	15209.08
4.	ಕೋಲಾರ	7402.00	14742.61	22144.61	6476.62	14888.11	21364.73	5812.50	16595.25	22407.75
5.	ಶಿವಮೊಗ್ಗ	5127.43	10216.18	15343.61	4068.37	1092.22	14260.59	3694.08	11369.39	15063.47
6.	ತುಮಕೂರು	8878.51	18399.89	27278.40	7069.03	16752.46	23821.49	6237.36	19598.98	25836.34
7.	ಮೈಸೂರು	6969.55	13014.29	19983.84	5823.99	13211.61	19035.60	4658.63	14486.04	19144.67
8.	ಚಿಕ್ಕಮಗಳೂರು	4948.17	9149.11	14097.28	4222.25	9129.54	13351.79	4184.97	10066.48	14251.45
9.	ದಕ್ಷಿಣ ಕನ್ನಡ	4381.79	9635.91	14017.70	3889.57	9405.10	13294.47	2947.38	10576.13	13523.51
10.	ಹಾಸನ	6024.38	12285.19	18309.57	5050.74	12279.51	17330.25	4407.06	13235.88	17642.94
11.	ಕೊಡಗು	2624.29	4115.31	6739.60	2237.38	4165.40	6402.78	2294.19	4381.37	6675.56
12.	ಮಂಡ್ಯ	5422.57	11592.90	17015.47	4435.60	11627.42	16063.02	4585.22	13637.51	18222.73
13.	ಬೆಳಗಾವಿ	10458.62	20661.96	31120.58	8541.86	20571.64	29113.50	8160.66	23489.01	31649.67
14.	ಬಿಜಾಪುರ	5559.93	10921.71	16481.64	5028.31	10567.82	15596.13	4141.35	11676.47	15817.82

1	2	3	4	5	6	7	8	9	10	11
15.	ಧಾರವಾಡ	3685.12	7790.30	11475.42	3149.06	7457.57	10606.63	2866.00	8321.34	11187.34
16.	ಉತ್ತರ ಕನ್ನಡ	5654.45	11107.06	16761.51	4578.73	11225.21	15803.94	3663.52	10803.47	14466.99
17.	ಗುಲ್ಬರ್ಗಾ	8867.94	16497.40	25365.34	7121.98	17256.79	24378.77	7264.39	20268.75	27533.14
18.	ಬಳ್ಳಾರಿ	5987.07	9002.14	14989.21	4609.14	9149.94	13759.08	4206.23	9364.81	13625.04
19.	ಬೀದರ್	5020.75	9602.37	14623.12	4227.92	9759.99	13987.91	3507.76	10119.41	13627.17
20.	ರಾಯಚೂರು	4895.84	6324.34	11220.18	3963.51	6490.13	10453.64	4078.99	6976.70	11055.69
21.	ದಾವಣಗೆರೆ	5482.30	10706.77	16189.07	4413.81	10676.73	15090.54	4568.78	11761.71	16330.49
22.	ಚಾಮರಾಜನಗರ	3483.29	5168.04	8651.33	3007.37	4957.18	7964.55	2804.42	5666.81	8471.23
23.	ಉಡುಪಿ	2989.18	6936.19	9925.37	2625.22	7025.05	9650.27	2446.76	7366.96	9813.72
24.	ಬಾಗಲಕೋಟೆ	4850.44	8200.21	13050.65	4040.66	8098.95	12139.61	4088.64	8571.48	12660.12
25.	ಗದಗ್	3003.26	5668.97	8672.23	2565.85	5732.91	8298.76	2099.76	6836.71	8936.47
26.	ಹಾವೇರಿ	4262.29	8355.47	12617.76	3742.90	8091.73	11834.63	3257.31	9710.71	12968.02
27.	ಕೊಪ್ಪಳ	3718.79	4517.08	8235.87	3158.37	4701.10	7859.47	3348.43	5847.87	9196.30
28.	LUMPSUM	–	–	–	–	–	–	88.75	–	88.75
	ಒಟ್ಟು	145491.00	284032.56	42923.56	122393.67	282329.82	404723.49	111252.37	313379.12	424631.49